ಅಧ್ಯಕ್ಷರು.—ಮಂಡಿಸಲಾಯಿತು.

I have received a notice of adjournment motion under rule 59 given by Messrs. R.S. Mane, V.B. Patil, B.I. Patil regarding Lathi charge and firing resorted to by the Police in and around Belgaum in June 1986. I have withheld my consent to the notice as the same subject is coming up to-day under rule 68. Hon. members may have their say while participating in the discussion.

ಶ್ರೀ ಎಸ್ ಆರ್. ಬೊಮ್ಮಾಯಿ.—ಸ್ವಾಮಿ, ಶ್ರೀ ಎಂ.ಎಸ್. ಕೃಷ್ಣನ್ ಮತ್ತಿತರರು ಹಾಗೂ ಶ್ರೀ ಡಿ.ಟಿ. ಜಯಕುಮಾರ್ ಅವರು ತಂದಿರುವ ಸೂಚನೆಗಳನ್ನು ನಾಳೆ ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಆಯಿತು. ಅವನ್ನು ನಾಳೆಗೆ ತೆಗೆದುಕೊಳ್ಳಲಾಗುವುದು.

ನಿಯಮ ೫೩೪ರ ಮೇರೆಗೆ

I ಬೆಂಗಳೂರು ನಗರದಲ್ಲಿ ಕಾನೂನು ಪಾಲನೆ ವ್ಯವಸ್ಥೆ ಹದಗೆಟ್ಟಿರುವುದು

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಈಗ್ಗೆ ಕೆಲವು ತಿಂಗಳುಗಳಿಂದ ಕರ್ನಾಟಕದ ಹೃದಯವಾಗಿರುವ ಬೆಂಗಳೂರು ನಗರದಲ್ಲಿನ ನ್ಯಾಯ ಕಾನೂನು ವ್ಯವಸ್ಥೆ ಕುಲಗೆಟ್ಟ ಪರಿಸ್ಥಿತಿಯಿಂದಾಗಿ ಜನರು ಭಯಬಿದ್ದು ಕಂಗಾಲಾಗುವ ಪರಿಸ್ಥಿತಿ ಒದಗಿದೆ. ದಿನ ಬೆಳಗಾದರೆ ಒಂದು ಕೊಲೆ, ದರೋಡೆ, ಕಳ್ಳತನ, ಚೈನು ಕಿತ್ತುಕೊಳ್ಳುವಿಕೆ ಇಂತಹ ಪ್ರಸಂಗಗಳನ್ನು ದಿನಪತ್ರಿಕೆಗಳಲ್ಲಿ ಓದಿ ಜನತೆಯು ಭಯ ಭೀತಿಯಿಂದ ತತ್ತರಿಸಿದ್ದಾರೆ. ನಡುಹಗಲಲ್ಲಿ ಜನಭರಿತ ನಡುರಸ್ತೆಯಲ್ಲೇ ನಡೆದ ದಿವಾಕರ ಹೆಗ್ಗಡೆ, ಶಾಮಣ್ಣರೆಡ್ಡಿ, ಆಟೋಡ್ರೈವರ್‌ಗಳು ಮಾರಾರ್ ಇತರತೆ ಕೊಲೆ ಕಳ್ಳತನ ದರೋಡೆ ಮತ್ತು ಹೆಣ್ಣು ಮಕ್ಕಳ ಚೈನ್ ಕಿತ್ತುಕೊಳ್ಳುವಿಕೆಯ ಪ್ರಸಂಗಗಳು ನಡೆದಿದ್ದನ್ನು ಕಾಣುತ್ತಿದ್ದೇವೆ. ಇದರಿಂದ ರಕ್ಷಣೆ ಇಲಾಖೆಯನ್ನು ನಂಬಿದ್ದ ಜನತೆ ಈ ಬಗ್ಗೆ ಪೂರ್ಣ ನಂಬಿಕೆ ಕಳೆದುಕೊಂಡು ಅವರ ರಕ್ಷಣೆಯ ಬಗ್ಗೆ ಶಂಕೆ ಮಾಡಿದೆ. ಇದನ್ನು ತಪ್ಪಿಸಲು ಸೂಕ್ತ ಕ್ರಮ ಆಗತ್ಯ ಇಲ್ಲದಿದ್ದಲ್ಲಿ ರಕ್ಷಣಾ ಇಲಾಖೆ ಅಪಘಾತಗಳ ತಡೆಹಿಡಿಯುವಿಕೆಯನ್ನು ತಪ್ಪಿಸಲು ತಮ್ಮ ಕೈಲಾಗದೆಂದು ಹೇಳಿಬೇಕು. ಇಲ್ಲವಾದರೆ ಇನ್ನು ಮುಂದಾದರೂ ಈ ಬಗ್ಗೆ ಸೂಕ್ತ ಮುನ್ನೆಚ್ಚರಿಕೆ ಕ್ರಮ ಕೈಗೊಂಡು ಜನತೆಯ ರಕ್ಷಣೆಗೆ ಇರುವ ಅವಶ್ಯಕತೆ ಇರುವುದನ್ನು ಗಮನಿಸಲು ಮಾನ್ಯ ಗೃಹಮಂತ್ರಿಗಳು ಈ ಬಗ್ಗೆ ಸೂಕ್ತ ವಿವರಣೆಯನ್ನು ನೀಡಬೇಕೆಂದು ಸದನದಲ್ಲಿ ಈ ಪ್ರಸ್ತಾಪ ತರಲು ಅನುಮತಿ ಕೇಳುತ್ತೇನೆ.

ಶ್ರೀ ಬಿ. ರಾಚಯ್ಯ.—ಉತ್ತರವು ಇಂಗ್ಲೀಷಿನಲ್ಲಿರುವುದನ್ನು ಕನ್ನಡಕ್ಕೆ ತರ್ಜಮೆಗೆ ಕಳಿಸಿರುವುದರಿಂದ ಮಧ್ಯಾಹ್ನ ೩ ಗಂಟೆಗೆ ಇದನ್ನು ತೆಗೆದುಕೊಳ್ಳಬೇಕೆಂದು ನನ್ನ ವಿನಂತಿ.

ಅಧ್ಯಕ್ಷರು.—ಆಗಬಹುದು.

II ತರೀಕೆರೆ ತಾಲ್ಲೂಕು ಸೊಲ್ಲಾಪುರದ ಸರ್ಕಾರಿ ಪ್ರೌಢಶಾಲೆಯ ಕೊಠಡಿಗಳು ಶಿಥಿಲವಾಗಿರುವುದು

ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ, ತರೀಕೆರೆ ತಾಲ್ಲೂಕು ಸೊಲ್ಲಾಪುರ ಸರ್ಕಾರಿ ಪ್ರೌಢಶಾಲೆಯ ೪ ಕೊಠಡಿಗಳು ಪೂರ್ಣ ಶಿಥಿಲವಾಗಿ ಮೂರು ವರ್ಷವಾದರೂ ರಿಪೇರಿ ಮಾಡದೇ ವಿದ್ಯಾರ್ಥಿಗಳು ಬೀದಿಯಲ್ಲಿ ಪಾಠ ಕೇಳುವ ಪರಿಸ್ಥಿತಿ ಬಂದಿದೆ. ಎಷ್ಟೋ ದಿನಗಳು ಪಾಠಗಳು ನಡೆಯದೇ ಇರುವ ದಿನಗಳು ಇವೆ. ಆದ್ದರಿಂದ ತಾವು ಯಾವ ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಡಿ. ಮಂಜುನಾಥ್.—ಹಾಗೇನೂ ಇಲ್ಲ. ಇದರ ಬಗ್ಗೆ ಈಗಾಗಲೇ ಡಿ.ಡಿ.ಪಿ.ಐ. ಯವರಿಗೆ ಸೂಚನೆ ಕೊಟ್ಟಿದ್ದೇನೆ. ಆದಷ್ಟು ಬೇಗ ರಿಪೇರಿಗೆ ಏರ್ಪಾಡು ಮಾಡುತ್ತೇನೆ.